**ಸಾಕ್ಷಿಯನ್ನು ದಿಃ 02.03.2026 ರಂದು ಕರೆಸಿ ಪ್ರಮಾಣವಚನ ಭೋದಿಸಲಾಯಿತು.**

**ಮುಂದುವರೆದ ಪಾಟೀ ಸವಾಲುಃ ವಾದಿ ಪರ ಶ್ರೀ ಬಿ.ಸಿ.ಎಸ್ ವಕೀಲರಿಂದಃ-**

ನಿಡಿ. 1 ರ ಅಗ್ರಿಮೆಂಟ್ ಅನ್ನು ವಕೀಲರು ತಯಾರು ಮಾಡಿರುತ್ತಾರೆ. ಅದನ್ನು ತಯಾರು ಮಾಡಲು ನಾನು ಹೋಗಿದ್ದೆ ಎಂದರೆ ಸರಿಯಲ್ಲ. ವಾದಿಯರು ದಾಖಲೆಗಳನ್ನು ವಕೀಲರಿಗೆ ತೆಗೆದುಕೊಂಡು ಹೋಗಿ ಕೊಟ್ಟಿದ್ದರಿಂದ ಅವರೆ ತಯಾರು ಮಾಡಿರುತ್ತಾರೆ. ವಾದಿಯರು ಸದರಿ ದಾಖಲೆಗಳನ್ನು ಕೊಟ್ಟಿಲ್ಲ, ನಾನೆ ದಾಖಲೆಗಳನ್ನು ಕಂಪ್ಯೂಟರ್ ನಿಂದ ತೆಗೆದುಕೊಟ್ಟು ತಯಾರು ಮಾಡಿಸಿರುತ್ತೇನೆ ಎಂದರೆ ಸರಿಯಲ್ಲ. ಹಾಗೆ ತಯಾರು ಮಾಡಿಸಿದಂತಹ ದಾಖಲೆಯನ್ನು ಓದಿ ಹೇಳುವಂತೆ ಕೇಳಿದಾಗ ಅದನ್ನು ಹೇಳದಂತೆ ತಯಾರು ಮಾಡಿದ ವಕೀಲರಿಗೂ ಸಹ ಬೆದರಿಕೆ ಹಾಕಿದ್ದೆ ಎಂದರೆ ಸರಿಯಲ್ಲ.

ನಿಡಿ. 1 ಕರಾರುಪತ್ರ ನೊಂದಣಿ ಪೂರ್ವದಲ್ಲಿ ಅಂದರೆ ದಿಃ 21.02.2023 ರಂದು ನಮ್ಮ ಕ್ವಾರೆ ಜಾಗದಲ್ಲಿ ಕ್ರಯ ನಿಷ್ಕಯ ಆಗಿತ್ತು ಎಂದರೆ ಸರಿಯಲ್ಲ. ಹಾಗೆ ವ್ಯವಹಾರ ಮಾಡಿಸಿದವರು ನಮ್ಮ ಪಕ್ಕದ ಜಮೀನಿನ ಬಸವರಾಜು ರವರು ಅವರೆ ವಾದಿಯನ್ನು ಕರೆದುಕೊಂಡು ಬಂದಿದ್ದು, ಸಾಕ್ಷಿಯಾಗಿ ಸಹಿ ಮಾಡಿದ್ದಾರೆ. ಸದರಿ ಬಸವರಾಜು ರವರಿಗೆ ನ್ಯಾಯಾಲಯದಿಂದ ಸಮನ್ಸ ಜಾರಿ ಮಾಡಿದ್ದರೂ ಸಾಕ್ಷಿ ಹೇಳಲು ಬಂದಿಲ್ಲ ಎಂದರೆ ನನಗೆ ಅದರ ಬಗ್ಗೆ ಗೊತ್ತಿಲ್ಲ ಎನ್ನುತ್ತಾರೆ. ಅವರನ್ನು ಕರೆಸಿ ವಿಚಾರಣೆ ಮಾಡಿಸಲು ನನಗೆ ಯಾವುದೆ ತೊಂದರೆ ಇಲ್ಲ. ದಿಃ 21.02.2023 ರಂದು 1 ಗಂಟೆ 9 ನಿಮಿಷದಲ್ಲಿ ಹರೀಶ್, ವೆಂಕಟೇಶ್ ಮತ್ತು ಇಬ್ಬರೂ ವಾದಿಯರು, 2 ನೇ ವಾದಿಯ ಹೆಂಡತಿ ಎಲ್ಲರೂ ಸೇರಿ ನಮ್ಮ ಕ್ವಾರೆಯಲ್ಲಿ ನಿಷ್ಕಯ ಮಾಡಿದ್ದರು ಎಂದರೆ ಸರಿಯಲ್ಲ. ಮಧ್ಯಾಹ್ನ 1.09 ರಿಂದ 2.09 ಗಂಟೆ ವರೆಗೆ ಕ್ರಯ ನಿಷ್ಕಯ ನಡೆದಿರುತ್ತದೆ ಎಂದರೆ ಸರಿಯಲ್ಲ. ಅದಕ್ಕೆ ಸಂಬಂಧಿಸಿದಂತೆ ವಾದಿಯರು ಸಿಡಿ ಸಹ ಕೊಟ್ಟಿದ್ದಾರೆ ಎಂದರೆ ಅದು ನಾನು ನೋಡಿಲ್ಲ ಎನ್ನುತ್ತಾರೆ.

ದಿಃ 06.03.2023 ರಂದು ನೇರವಾಗಿ ಸಬ್ ರಿಜಿಸ್ಟ್ರಾರ್ ಕಛೇರಿಗೆ ಬಂದಾಗ ಮಾತುಕತೆ ಆಗಿತ್ತು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಆ ಸಮಯದಲ್ಲಿ ನಮ್ಮ ಪಕ್ಕದ ಜಮೀನು ಬೆಲೆ ಎಕರೆಗೆ 30 ಲಕ್ಷ ನಡೆಯುತ್ತಿದೆ ಎಂದು ನಾನೆ ಹೇಳಿದ್ದೆ ಎಂದರೆ ಸರಿಯಲ್ಲ. ಆದರೂ ನಾನು ಎಕರೆಗೆ 31-1/2 ಲಕ್ಷ ರೂ ತೆಗೆದುಕೊಡುವುದಾಗಿ ನಿಷ್ಕಯ ಆಗಿ ಕೊಡುತ್ತೇನೆ ಎಂದು ಹೇಳಿದ್ದೆ ಎಂದರೆ ಸರಿಯಲ್ಲ. ದಿಃ 06.03.2023 ರಂದು ಸ್ಟಾಂಪ್ ಪೇಪರ್ ಮೇಲೆ ಕೇವಲ 6-1/2 ಲಕ್ಷ ಕ್ಕೆ ಮಾತ್ರ ಮೋಸದಿಂದ ರಿಜಿಸ್ಟರ್ ಮಾಡಿಸಿರುತ್ತೇನೆ ಎಂದರೆ ಸರಿಯಲ್ಲ. 31-1/2 ಲಕ್ಷ ರೂ ಗಳಲ್ಲಿ 5- 1/2 ಲಕ್ಷ ಈಗ ಕೊಟ್ಟಿದ್ದೇನೆ, ಉಳಿಕೆ ಹಣವನ್ನು ದಿಃ 25.03.2023 ರಂದು ಕೊಡುತ್ತೇನೆ ಎಂದು ಹೇಳಿದ್ದೆ ಎಂದರೆ ಸರಿಯಲ್ಲ.

ಸದರಿ ಅಂದರೆ ದಿಃ 25.03.2023 ರಂದು ಹರೀಶ್ ರವರು ಫೋನ್ ಮಾಡಿದಾಗ ಕ್ವಾರೆ ಹತ್ತಿರ 1 ನೇ ವಾದಿ ಬೇಡ ಮತ್ತು ಕ್ವಾರೆ ಹುಡುಗರು ಸಹ ಬೇಡ ಒಬ್ಬರೆ ಬನ್ನಿ ಎಂದು ನಾನು ಹೇಳಿದ್ದೆ ಎಂದರೆ ಸರಿಯಲ್ಲ. ಆಗ 2 ನೇ ವಾದಿಯ ಜೊತೆ 7 ಜನ ಸೇರಿ ಕ್ವಾರೆ ಹತ್ತಿರ ಬಂದಿದ್ದು, ಆಗ ಪುನಃ ಉಳಿದ ಹಣವನ್ನು ಅಗ್ರಿಮೆಂಟ್ ಮಾಡುವ ದಿನ ಕೊಡುತ್ತೇನೆ ಎಂದು ಹೇಳಿ ಒಪ್ಪಿಕೊಂಡಿದ್ದೆ ಎಂದರೆ ಸರಿಯಲ್ಲ. ಹಣ ಕೊಡದಿದ್ದರೆ ಅಗ್ರಿಮೆಂಟ್ ಅನ್ನು ಕ್ಯಾನ್ಸಲ್ ಮಾಡಿಸಿಕೊಳ್ಳುತ್ತೇನೆ ನೀವು ಹೇಳಿದ್ರಿ ಎಂಬ ಪ್ರಶ್ನೆಗೆ ಸಾಕ್ಷಿ ಆ ದಿನ 7 ಜನರು ಅಗ್ರಿಮೆಂಟ್ ಅನ್ನು ಕ್ಯಾನ್ಸಲ್ ಮಾಡಿಸಿ ಕೊಡು ಎಂದು ಕೇಳಿಕೊಳ್ಳು ಬಂದಿದ್ದರು ಎನ್ನುತ್ತಾರೆ. ಸಾಕ್ಷಿಗೆ ಒಂದು ಪೋಟೊ ತೋರಿಸಲಾಗಿ ಅದನ್ನು ನೋಡಿ ಗುರುತಿಸಿದ್ದರಿಂದ ಅದನ್ನು **ನಿಪಿ. 21** ಎಂದು ಗುರುತಿಸಲಾಯಿತು. ಹಾಗೆ ವಾದಿ ಮತ್ತು ಅವರ ಕಡೆಯವರು ಬಂದಾಗ ನಾನು ಉಡಾಫೆ ಮಾಡಿ ಯಾವುದೆ ಮಾತುತಕೆ ಆಡದೆ ಎದ್ದು ಹೋದೆ ಎಂದರೆ ಸರಿಯಲ್ಲ. ದೂರವಾಣಿ ಮೂಲಕ ವಾದಿಯವರು ಮಾತುತಕೆ ಮಾಡಿದ್ದರೂ, ನಾನು ಸ್ಪಂದಿಸಿಲ್ಲ ಎಂದರೆ ಸರಿಯಲ್ಲ ಸಾಕ್ಷಿ 11 ಇ ಸ್ಕೇಚ್ ಮಾಡಿಸಿಕೊಂಡು ಬನ್ನಿ ಎಂದು ಹೇಳಿದ್ದೆ ಎನ್ನುತ್ತಾರೆ. ಆ ರೀತಿ 11 ಇ ಸ್ಕೆಚ್ ಮಾಡಿಸಿಕೊಂಡು ಬನ್ನಿ ಎಂದು ಹೇಳಿಲ್ಲ, ಬದಲಾಗಿ ಅಗ್ರಿಮೆಂಟ್ ಕ್ಯಾನ್ಸಲ್ ಮಾಡಿಸಿ ಎಂದು ಹೇಳಿದ್ದೆ ಎಂದರೆ ಸರಿಯಲ್ಲ.

ವಾದಿಯರು ಅಗ್ರಿಮಂಟ್ ಕ್ಯಾನ್ಸಲ್ ಮಾಡಿಸಿಕೊಡುವಂತೆ ನೋಟೀಸು ಕೊಟ್ಟಿದ್ದರು ಎಂದರೆ ಸಾಕ್ಷಿ ನಮ್ಮ ವಕೀಲರ ಮೂಲಕ ಉತ್ತರ ಕೊಡಿಸಿದ್ದೆ ಎನ್ನುತ್ತಾರೆ. ವಾದಿಯರು ವ್ಯವಸಾಯ ಮಾಡಿಕೊಂಡಿದ್ದು, ಅವರು ಕೂಲಿ ಮಾಡಿಕೊಂಡು ಜೀವನ ಮಾಡುತ್ತಿದ್ದರಿಂದ ಅವರಿಗೆ ಬೇರೆ ಜಮಿಲನು ಇಲ್ಲದಿದ್ದರಿಂದಚಿ ಕ್ರಯ ಮಾಡಿಕೊಳ್ಳಲು ಒಪ್ಪಿಕೊಳ್ಳದೆ, ಹಣ ವಾಪಸ್ಸು ಕೊಡಲು ಸಿದ್ದರಿರುತ್ತಾರೆ ಎಂದರೆ ಸಾಕ್ಷಿ ನಾನು ಬೇರೆಯವರಿಂದ ಸಾಲ ತಂದು ಅವರಿಗೆ ಕೊಟ್ಟಿದ್ದೆ, ಇನ್ನು ಉಳಿದ 1-1/2 ಲಕ್ಷ ರೂ. ಹಣ ಕೊಟ್ಟು ಕ್ರಯ ಪತ್ರ ಬರೆಯಿಸಿಕೊಳ್ಳಲು ಸಿದ್ದನಿದ್ದೇನೆ ಎನ್ನುತ್ತಾರೆ. ಇದಕ್ಕೆ ಸಂಬಂಧಿಸಿದಂತೆ ವಾದಿಯವರು ನನ್ನ ವಿರುದ್ದ ದೂರು ಕೊಟ್ಟಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. ರಿಯಲ್ ಎಸ್ಟೇಟ್ ಮಾಡುವ ಉದ್ದೇಶದಿಂದ ವಾದಿಯವರಿಗೆ ಮೋಸ ಮಾಡಿ ಕಡಿಮೆ ಬೆಲೆಗೆ ಜಮೀನು ತೆಗೆದುಕೊಳ್ಳಲು ಮುಂದಾಗಿದ್ದೇನೆ ಎಂದರೆ ಸರಿಯಲ್ಲ. ನಾನು ವ್ಯವಸಾಯಗಾರ. ನಾನು ವ್ಯವಸಾಯಗಾರನೆಂದು ತೋರಿಸಲು ಯಾವುದೆ ದಾಖಲೆ ಹಾಜರು ಪಡಿಸಿಲ್ಲ ಎಂದರೆ, ಮುಂದೆ ಹಾಜರು ಪಡಿಸುತ್ತೇನೆ. ಪಕ್ಕದಲ್ಲಿ 2 ಎಕರೆ ಜಮೀನು ಖರೀದಿ ಮಾಡಿದ್ದೇನೆ ಎನ್ನುತ್ತಾರೆ.

ಅಗ್ರಿಮೆಂಟ್ ಆದ 6 ತಿಂಗಳಾದರೂ ಕ್ರಯ ಪತ್ರ ಮಾಡಿಕೊಡಲು ಸಮಯ ಇದ್ದು, 3 ತಿಂಗಳಲ್ಲಿ ವಾದಿಯವರು ಕರಾರು ಪತ್ರ ಕ್ಯಾನ್ಸಲ್ ಮಾಡುವಂತೆ ನ್ಯಾಯಾಲಯಕ್ಕೆ ಬಂದಿರುತ್ತಾರೆ ಎಂದರೆ ಸಾಕ್ಷಿ ವಾದಿಯರು 11 ಇ ಸ್ಕೆಚ್ ಮಾಡಿ 6 ತಿಂಗಳು ಸಮಯ ತೆಗೆದುಕೊಂಡಿದ್ದು, ನಂತರ 1 ತಿಂಗಳೊಳಗೆ ಜಮೀನು ಬೆಲೆ ಜಾಸ್ತಿ ಆಗಿದ್ದರಿಂದ, ಅಗ್ರಿಮೆಂಟ್ ಕ್ಯಾನ್ಸಲ್ ಮಾಡಿಸಿಕೊಳ್ಳಲು ನೋಟೀಸು ಕೊಟ್ಟಿದ್ದರು ಎನ್ನುತ್ತಾರೆ. ಸದರಿ ಜಮೀನು ಉಂಡ ಜಮೀನು ಅದ ಕಾರಣ ರಿಜಿಸ್ಟ್ರೇಶನ್ ಮಾಡಿಸಲು 11 ಇ ಸ್ಕೆಚ್ ನ ಅವಶ್ಯಕತೆ ಇಲ್ಲ ಎಂದರೆ, ಸಾಕ್ಷಿ ಪತ್ರ ಬರೆದುಕೊಟ್ಟಂತಹ ಬರಹಗಾರರು 11 ಇ ಸ್ಕೆಚ್ ಬೇಕು ಎಂದು ಹೇಳಿದ್ದರು ಎನ್ನುತ್ತಾರೆ. 11 ಇ ಸ್ಕೇಚ್ ಬಗ್ಗೆ ವಾದಿಗಳು ಏನು ಹೇಳಿಲ್ಲ ಎಂದರೆ ಸರಿಯಲ್ಲ.

**ಮರುವಿಚಾರಣೆ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸ ಇದೆ.,

(ಭಾಗ್ಯಮ್ಮ)

1 ನೇ ಹೆಚ್ಚುವರಿ ಹಿರಿಯ ಸಿವಿಲ್ ಜಡ್ಜ್

ಮತ್ತು ಜೆ.ಎಂ.ಎಫ್.ಸಿ.,ಹುಣಸೂರು.